SEVA BHARATHI
सेवा ही परमो धर्मः

ಸಂಪುಟ : 05
ಸಂಚಿಕೆ : 12

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಡಿಸೆಂಬರ್ 2024

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುತ್ತೂರಿನಲ್ಲಿ ವಸತಿಯುತ 27ನೇ ಉಚಿತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರ



## ಪುತ್ತೂರಿನಲ್ಲಿ ಗಾಲಿಕುರ್ಚಿ ಜಾಥಾ

## ಶಿಶಿಲ: ಸಂಪನ್ನಗೊಂಡ 29ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ

## ಎನೇಬಲ್ ಇಂಡಿಯಾ ಸಂಸ್ಥೆಯಿಂದ ಸೇವಾಧಾಮದ ಫಲಾನುಭವಿ ನಗದು ಪುರಸ್ಕಾರಕ್ಕೆ ಆಯ್ಕೆ

## ಬೆನ್ನುಹುರಿ ಅಪಘಾತಕ್ಕೊಳಗಾದರೂ ತನ್ನ ಜೀವನವನ್ನು ವೈಯರಿಂಗ್ ಕೆಲಸದಲ್ಲಿ ರೂಪಿಸಿಕೊಂಡ ರವೀಂದ್ರ ಶಂಕರನಾರಾಯಣ.

ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ಈ ತಿಂಗಳು 3 ದಿನಗಳ ಶಿಬಿರವು ಪುತ್ತೂರಿನ ಆದರ್ಶ ಆಸ್ಪತ್ರೆಯಲ್ಲಿ ವಿವಿಧ ಸಂಘ–ಸಂಸ್ಥೆಗಳ ಸಹಕಾರ–ದಲ್ಲಿ ಆಸ್ಪತ್ರೆಯ ಸಹಭಾಗಿತ್ವದಲ್ಲಿ ನಡೆಯಿತು. ಆಸ್ಪತ್ರೆಯ ವೈದ್ಯರ ತಂಡವು ಡಾ. ಎಂ.ಕೆ. ಪ್ರಸಾದ್ ಭಂಡಾರಿಯವರ ನೇತೃತ್ವದಲ್ಲಿ ಉಚಿತವಾಗಿ ಶಿಬಿರವು ಆಗಲು ಸಾಧ್ಯವಾಯಿತು. ಒಬ್ಬ ಮಾತೃಹೃದಯೀ ತಜ್ಞವೈದ್ಯರಾದ ಡಾ. ಎಂ.ಕೆ. ಪ್ರಸಾದ್ ಭಂಡಾರಿಯವರಿಗೆ ಭಗವಂತನು ಸಕಲೈಶ್ವರ್ಯಗಳನ್ನು ದಯಪಾಲಿಸಲಿ ಎಂಬುದು ನಮ್ಮೆಲ್ಲರ ಪ್ರಾರ್ಥನೆ.

ಇನ್ನು ಟೈಲರಿಂಗ್ ಶಿಬಿರವು ಈ ತಿಂಗಳ 29ನೇ ತಾರೀಖಿಗೆ ಶಿಶಿಲದಲ್ಲಿ ಸಮಾಪನಗೊಂಡಿತು. ತರಬೇತು ದಾರೆಯಾದ ವಿನಯ ಶೆಂಡ್ಯೆಯವರು ಉತ್ಸಾಹದಿಂದಾಗಿ ಸುಮಾರು 25 ಮಂದಿ ಟೈಲರಿಂಗ್ ಅನ್ನು ಅತ್ಯಲ್ಪ ಸಮಯದಲ್ಲಿ ತರಬೇತಿಗೊಳಿಸಿದ್ದು ಉಲ್ಲೇಖನೀಯ ಸಂಗತಿ. ಅದು ಕೂಡ ಯಾವುದೇ ಸಂಭಾವನೆಯನ್ನು ಪಡೆಯದೆ 2 ತಿಂಗಳ ಕಾಲ ತರಬೇತಿ ನೀಡಿರುವುದು ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಯಿತು.

ಮುಂದುವರಿದು ಈ ತಿಂಗಳಲ್ಲಿ ಬೆಂಗಳೂರಿನ ಅದಮ್ಯಚೇತನ ಸಂಸ್ಥೆಯ ತೇಜಸ್ವಿನಿ ಅನಂತಕುಮಾರ್, ಸ್ಪಂದನ ವಾಹಿನಿಯ ಸೆಬಾಸ್ಟಿಯನ್ನು ಕುಟುಂಬಸ್ಥರು, ಎಪಿಡಿ ಸಂಸ್ಥೆಯ ಡಾ. ಸೆಂಥಿಲ್ ಕುಮಾರ್, ಪ್ರಕರ್ಶ ಅಕಾಡೆಮಿಯ ಕು. ಕೀರ್ತನ ಮತ್ತು ಶ್ರೀ ಭವನ್ ವಿ. ಇವರೆಲ್ಲರ ಬೇಟಿಯು ಒಂದು ರೀತಿಯಲ್ಲಿ ಅಪ್ಯಾಯ–ಮಾನವಾಗಿತ್ತು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಈ ಸಂಸ್ಥೆಗಳು ಒಂದಲ್ಲ ಒಂದು ರೀತಿ–ಯಲ್ಲಿ ಆಶಾಕಿರಣವಾಗುವಲ್ಲಿ ಸಹಕಾರಿಯಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

ಮತ್ತೆ ಜನವರಿಯಲ್ಲಿ ರಕ್ತದಾನ ಶಿಬಿರದ ಆಯೋಜನೆ ಮಾಡಲು ತಯಾರಿಗಳಾಗುತ್ತಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಎರಡು ಶಿಬಿರಗಳು (CADIC comunity aided disability intervention camp) ಆಗಲಿಕ್ಕಿವೆ.

ಒಟ್ಟಿನಲ್ಲಿ ಸೇವೆಗಳು ನಿರಂತರವಾಗಬೇಕು ಅದು ನಮ್ಮ ನಿಮ್ಮೆಲ್ಲರ ಸಾಮಾಜಿಕ ಹೊಣೆಗಾರಿಕೆ ಕೂಡ.



'ಸೇವೆಯೇ ಪರಮಧರ್ಮ'

ವಂದನೆಗಳೊಂದಿಗೆ

ಇತೀ ತಮ್ಮವ

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ವಿಜಯ ಕೊಡವೂರು
6. ಶ್ರೀಮತಿ ಜೊಯ್ಸ್ ಫಿರೇರಾ
7. ಶ್ರೀ ನಾಗೇಂದ್ರ ಮಾಗಡಿ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ಗಣೇಶ್ ಶೆಂಡ್ಯೆ
10. ಡಾ. ಮುರಲೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುತ್ತೂರಿನಲ್ಲಿ ವಸತಿಯುತ 27ನೇ ಉಚಿತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರ









ಪುತ್ತೂರು: ಸೇವಾಭಾರತಿ ಸೇವಾಧಾಮ ಇದರ ಆಶ್ರಯದಲ್ಲಿ ಆದರ್ಶ ಆಸ್ಪತ್ರೆ, ಪುತ್ತೂರು ಮತ್ತು ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ), ಪುತ್ತೂರು ಇವರ ಸಹಯೋಗದಲ್ಲಿ ಎಂ. ಸಂಜೀವ ಶೆಟ್ಟಿ, ಜವಳಿ ವ್ಯಾಪಾರಸ್ಥರು ಪುತ್ತೂರು ಮತ್ತು ಸೋಜಾ ಮೆಟಲ್ ಮಾರ್ಟ್, ಪುತ್ತೂರು ಇವರ ಸಹಕಾರದಲ್ಲಿ ಬೆನ್ನುಹುರಿ ಅಪಘಾತ–ಕ್ಕೊಳಗಾದವರಿಗಾಗಿ ವಸತಿಯುತ 27ನೇ ಉಚಿತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರ ಹಾಗೂ ಗಾಲಿಕುರ್ಚಿ ಜಾಥಾ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಡಿಸೆಂಬರ್ 8 ರಂದು ಪುತ್ತೂರು ಆದರ್ಶ ಆಸ್ಪತ್ರೆಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಪುತ್ತೂರಿನ ಆದರ್ಶ ಆಸ್ಪತ್ರೆಯ ಹೆರಿಗೆ ಮತ್ತು ಸ್ತ್ರೀರೋಗ ತಜ್ಞರಾದ ಡಾ. ವೈ. ಸುಬ್ರಾಯ ಭಟ್ ಉದ್ಘಾಟಿಸಿ, ಶುಭಹಾರೈಸಿದರು.

ಸೇವಾಭಾರತಿಯ ಖಜಾಂಚಿ, ಮತ್ತು ಸೇವಾಧಾಮದ ಸಂಸ್ಥಾಪಕರಾದ ಕೆ. ವಿನಾಯಕ ರಾವ್ ಅಧ್ಯಕ್ಷತೆಯನ್ನು ವಹಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪುತ್ತೂರು, ಆದರ್ಶ ಆಸ್ಪತ್ರೆಯ ಸರ್ಜನ್ ಡಾ. ಎಂ.ಕೆ.ಪ್ರಸಾದ್ ಭಂಡಾರಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ನಮ್ಮ ಆಸ್ಪತ್ರೆಯಲ್ಲಿ ಇಂತಹ ಶಿಬಿರವನ್ನು ಇನ್ನೂ ಹೆಚ್ಚು ಆಯೋಜಿಸಲು ಸದಾ ನಾವು ಸಹಕರಿಸುತ್ತೇವೆ ಹಾಗೂ ಶಿಬಿರಾರ್ಥಿಗಳಿಗೆ ಉಚಿತ ವೈದ್ಯಕೀಯ ಸೇವೆಯನ್ನು ಒದಗಿಸುವುದಾಗಿ ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಪುತ್ತೂರಿನ ವಿಜಯ ಸಾಮ್ರಾಟ್ (ರಿ), ಸ್ಥಾಪಕಾಧ್ಯಕ್ಷರಾದ ಸಹಜ್ ರೈ ಬಳಜ್ಜರವರಿಗೆ ಮನವಿಪತ್ರವನ್ನು ಸಲ್ಲಿಸಲಾಯಿತು. ಮನವಿಪತ್ರವನ್ನು ಸ್ವೀಕರಿಸಿದ ನಂತರ ಸೇವಾಧಾಮದ ನೂತನ ಕಟ್ಟಡ ನಿರ್ಮಾಣಕ್ಕೆ ತಮ್ಮ ಕೈಲಾದಷ್ಟು ಸಹಕಾರ ನೀಡುತ್ತೇನೆಂದು ಭರವಸೆ ನೀಡಿದರು. ಇನ್ನೊರ್ವ ಅತಿಥಿ ಪುತ್ತೂರು ತಾಲೂಕು ಆರೋಗ್ಯಾಧಿಕಾರಿ ಡಾ. ದೀಪಕ್ ರೈ ಇವರಿಗೂ ಮನವಿ ಪತ್ರವನ್ನು ಸಲ್ಲಿಸಲಾಯಿತು. ಮನವಿ ಪತ್ರವನ್ನು ಸ್ವೀಕರಿಸಿ ಪುತ್ತೂರು ತಾಲೂಕಿನಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ಎಲ್ಲಾ ದಿವ್ಯಾಂಗರಿಗೆ ಸರಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಎರಡು ತಿಂಗಳ ಒಳಗೆ ದೊರಕಿಸುವುದಾಗಿ ಭರವಸೆ ನೀಡಿದರು.

ಪುತ್ತೂರು, ಆದರ್ಶ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಶ್ಯಾಮ ಭಟ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಸೇವಾಭಾರತಿ ಸಂಸ್ಥೆಗೆ ಹಾಗೂ ಎಲ್ಲಾ ಶಿಬಿರಾರ್ಥಿಗಳಿಗೆ ಶುಭಹಾರೈಸಿದರು.

ಒಟ್ಟು 15 ಮಂದಿ ಶಿಬಿರಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು. ದಕ್ಷಿಣಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಕುಸುಮಾಧರ ಸ್ವಾಗತಿಸಿ, ಸೇವಾಭಾರತಿ ಸಂಸ್ಥೆಯ ಹಿರಿಯ ಪ್ರಬಂಧಕರಾದ ಚರಣ್ ಕುಮಾರ್ ಎಂ. ನಿರೂಪಿಸಿ ಧನ್ಯವಾದವಿತ್ತರು.

# ಪುತ್ತೂರಿನಲ್ಲಿ ಗಾಲಿಕುರ್ಚಿ ಜಾಥಾ





**ಪುತ್ತೂರು (ಡಿ.09):** ಸೇವಾಭಾರತಿ ಸೇವಾಧಾಮ ಇದರ ಆಶ್ರಯದಲ್ಲಿ ಆದರ್ಶ ಆಸ್ಪತ್ರೆ, ಪುತ್ತೂರು ಮತ್ತು ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ), ಪುತ್ತೂರು ಇವರ ಸಹಯೋಗದಲ್ಲಿ ಎಂ. ಸಂಜೀವ ಶೆಟ್ಟಿ, ಜವಳಿ ವ್ಯಾಪಾರಸ್ಥರು ಪುತ್ತೂರು ಮತ್ತು ಸೋಜಾ ಮೆಟಲ್ ಮಾರ್ಟ್, ಪುತ್ತೂರು ಇವರ ಸಹಕಾರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ವಸತಿಯುತ 27ನೇ ಉಚಿತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರದಲ್ಲಿ ಗಾಲಿಕುರ್ಚಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಜನಸಾಮಾನ್ಯರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಹಾಗೆ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಮುಖ್ಯವಾಹಿನಿಗೆ ಕರೆತರುವ ಉದ್ದೇಶದಿಂದ ಡಿಸೆಂಬರ್ 09 ರಂದು ಪುತ್ತೂರು ಆದರ್ಶ ಆಸ್ಪತ್ರೆಯಲ್ಲಿ ಗಾಲಿಕುರ್ಚಿ ಜಾಥಾವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಪುತ್ತೂರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಶ್ರೀ ಆಂಜನೇಯ ರೆಡ್ಡಿ ಹಸಿರು ನಿಶಾನೆಯನ್ನು ತೋರಿಸಿ ಜಾಥಾಕ್ಕೆ ಚಾಲನೆಯನ್ನು ನೀಡಿದರು.


ಮಹಾಲಿಂಗೇಶ್ವರ ದೇವಸ್ಥಾನದಿಂದ ಪ್ರಾರಂಭಿಸಿ ಮೈ ದೇ ದೇವುಸ್ ಚರ್ಚ್ ಮುಂಭಾಗದಿಂದ ಎಪಿಎಂಸಿ ರಸ್ತೆ ಮುಖಾಂತರ ಆದರ್ಶ ಆಸ್ಪತ್ರೆಯ ತನಕ ಜಾಥಾವನ್ನು ಮಾಡಲಾಯಿತು. ಒಟ್ಟು 15 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು, ಸೇವಾಭಾರತಿ ಕಾರ್ಯದರ್ಶಿ ಬಾಲಕೃಷ್ಣ, ಪೊಲೀಸ್ ಸಿಬ್ಬಂದಿಗಳು, ಸೇವಾಭಾರತಿ ಸಿಬ್ಬಂದಿ ವರ್ಗದವರು, ಪ್ರಗತಿ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲರು ಹಾಗೂ ವಿದ್ಯಾರ್ಥಿಗಳು ಜಾಥಾದಲ್ಲಿ ಭಾಗವಹಿಸಿದ್ದರು.

## ಬೆಳ್ತಂಗಡಿ ರೋಟರಿ ಕ್ಲಬ್‌ನಿಂದ ಸೇವಾಗೌರವ




ಬೆಳ್ತಗಂಡಿ ರೋಟರಿ ಕ್ಲಬ್ ತಂಡದ ಕಾರ್ಯದರ್ಶಿ ರೋ। ಸಂದೇಶ್ ಕುಮಾರ್ ಮತ್ತು ರೋ। ಶ್ರೀಧರ್ ಕೆ.ವಿ. ಡಿಸೆಂಬರ್ 4 ರಂದು ಸೇವಾನಿಕೇತನ ಕನ್ಯಾಡಿಗೆ ಭೇಟಿ ನೀಡಿ ವಿಶ್ವ ವಿಕಲಚೇತನರ ದಿನಾಚರಣೆಯ ಅಂಗವಾಗಿ ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್‌ರವರಿಗೆ ಫಲಪುಷ್ಪವನ್ನು ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## APD ಸಂಸ್ಥೆಯ ಸಿ.ಇ.ಓ ಭೇಟಿ



ಬೆಂಗಳೂರಿನ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸಿಬಿಲಿಟಿ ಸಂಸ್ಥೆಯ ಸಿ.ಇ.ಓ ಶ್ರೀ ಸೆಂಥಿಲ್ ಮತ್ತು ಅವರ ಕುಟುಂಬವು ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಡಿಸೆಂಬರ್ 27 ರಂದು ಭೇಟಿ ನೀಡಿ ಸನಿವಾಸಿಗಳಿಗೆ ಶುಭಹಾರೈಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ, ಅಕೌಂಟೆಂಟ್ ಕು ಅಕ್ಷತಾ, ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಮತ್ತು ಆರೈಕೆದಾರರು ಉಪಸ್ಥಿತರಿದ್ದರು.

## ಸೇವಾನಿಧಿ ದಾನಿಗಳು

ಶ್ರೀ ಬಾಲಸುಬ್ರಹ್ಮಣ್ಯ, ಬೆಂಗಳೂರು
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಶ್ರೀ ಕೆ. ಪುರಂದರ ರಾವ್, ನಾರ್ಯ
ಶ್ರೀ ಕೆ. ಸೂರ್ಯನಾರಾಯಣ ರಾವ್, ಧರ್ಮಸ್ಥಳ
ಶ್ರೀ ಗೌರಿಶಂಕರ್, ಧರ್ಮಸ್ಥಳ
ಶ್ರೀಮತಿ ಜಯಂತಿ ಪುರಂದರ, ನಾರ್ಯ
ಮಾಸ್ಟರ್ ರಾಹುಲ್ ಪ್ರಭು, ಕನ್ಯಾಡಿ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ಪುರುಷೋತ್ತಮ್ ಡಿ.ಎ., ಧರ್ಮಸ್ಥಳ
ಶ್ರೀ ಕೆ. ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಕಾರ್ತಿಕ್ ಕೆ., ಧರ್ಮಸ್ಥಳ
ಡಾ. ರಾಮಕೃಷ್ಣ ಭಟ್ ಜಿ.ಎನ್, ಕನ್ಯಾಡಿ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಶ್ರೀ ಮಧುಸೂಧನ್, ಉಜಿರೆ
ಶ್ರೀ ಮಧ್ವರಾಜ್ ಎಂ.ಜಿ, ಧರ್ಮಸ್ಥಳ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಬಾಲಕೃಷ್ಣ ರಾವ್ ಕೆ. ಕನ್ಯಾಡಿ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ನೀಲಕಂಠ, ನಾರ್ಯ
ಶ್ರೀ ಸಂತೋಷ್ ಕೆ., ಕೊಕ್ಕಡ
ಹೋಟೆಲ್ ಬಾಂಬೆಡೈನ್, ಉಜಿರೆ
ಕು. ಸಂತೃಪ್ತಿ ಆರ್ ಫಡ್ಕೆ, ಬೆಳ್ತಂಗಡಿ
ಶ್ರೀ ಜಯಾನಂದ ಎಂ, ಧರ್ಮಸ್ಥಳ
ಶ್ರೀ ರಜತ್ ಕುಮಾರ್ ಜೆ.ಡಿ, ವೇಣೂರು
ಬೇಬಿ ಶ್ರೀ ಬಿಲ್ವನಿ, ಉಜಿರೆ
ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
ಶ್ರೀ ಸುನಿಲ್ ಪಿ. ಎನ್, ಕನ್ಯಾಡಿ
ಶ್ರೀಮತಿ ದಿವ್ಯಾ ಪುರಂದರ, ಬೆಂಗಳೂರು
ಶ್ರೀ ಶೆಲ್ಡನ್ ಎಲ್ ಮೋನಿಸ್, ಬೆಳ್ತಂಗಡಿ
ಶ್ರೀಮತಿ ಸವಿತಾ ಎಂ ರಾವ್, ಕನ್ಯಾಡಿ
ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ

## ವಸ್ತು ರೂಪದಲ್ಲಿ ದೇಣಿಗೆ ನೀಡಿದವರು

ಉಜಿರೆ ಹವ್ಯಕ ವಲಯ, ಉಜಿರೆ
ಶ್ರೀ ನಂದನ್, ಚಿಕ್ಕಮಗಳೂರು
ಶ್ರೀ ರಾಜೇಶ್, ಚಿಕ್ಕಮಗಳೂರು

## ಮಹನೀಯ ದಾನಿಗಳು

ಶ್ರೀ ಹರೀಶ್ ಗಂಭೀರ್, ಬೆಂಗಳೂರು
ಶ್ರೀಮತಿ ಸತ್ಯಭಾಮಾ
ಹೋಟೆಲ್ ಸಂಧ್ಯಾ ವೆಜ್, ಪರ್ಕಳ
ಶ್ರೀರಾಮ ಕಾರಂತ್, ಉಜಿರೆ
ಶ್ರೀಮತಿ ಕೆ.ಎಸ್. ಗೀತಾ, ಬೆಂಗಳೂರು
ಭವ್ಯ ರೈ, ಪುತ್ತೂರು
ಶ್ರೀ ಕೆ.ಎಲ್ ಗೋಪಾಲಕೃಷ್ಣ, ಬೆಂಗಳೂರು
ಶ್ರೀಮತಿ ಶ್ವೇತಾ ಜಿ. ಪೈ, ಬೆಂಗಳೂರು
ಶ್ರೀ ಪಣಂಬೂರು ಬಾಲಕೃಷ್ಣ ರಾವ್, ಬೆಂಗಳೂರು
ಶ್ರೀಮತಿ ಮೀನಾಕ್ಷಿ ಶಾಸ್ತ್ರಿ, ಬೆಂಗಳೂರು
ಶ್ರೀಮತಿ ಸ್ಮಿತಾಶ್ರೀ ಹರ್ಷ, ಬೆಂಗಳೂರು
ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬೆಂಗಳೂರು
ಶ್ರೀ ಕೆ. ಪುರಂದರ ರಾವ್, ನಾರ್ಯ
ಶ್ರೀ ರಜತ್ ರಾವ್, ಧರ್ಮಸ್ಥಳ
ಶ್ರೀಮತಿ ಕೆ. ಸುಮತಿ, ಬೆಂಗಳೂರು
ಶ್ರೀ ರಾಜೇಶ್ ಕೆ. ಚಿಕ್ಕಮಗಳೂರು
ಡಾ. ಪ್ರಸಾದ್ ಭಂಡಾರಿ, ಪುತ್ತೂರು
ಶ್ರೀ ಎಂ. ಸಂಜೀವ ಶೆಟ್ಟಿ, ಪುತ್ತೂರು
ಸೋಜಾ ಮೆಟಲ್ ಮಾರ್ಟ್, ಪುತ್ತೂರು
ಶ್ರೀ ಕೆ. ಸುಜೀಂದ್ರ ಪ್ರಭು, ಪುತ್ತೂರು
ಕು. ಚೈತ್ರ ಜಿ.ಕೆ., ಮಡಿಕೇರಿ
ಶ್ರೀ ಸೆಬಾಸ್ಟಿಯನ್, ಮುಂಡಾಜೆ
ಶ್ರೀ ನಂದೀಶ್, ಶಿವಮೊಗ್ಗ
ಶ್ರೀ ಪ್ರೇಮ್ ಕುಮಾರ್, ದಾವಣಗೆರೆ
ಶ್ರೀ ಬಿ ಎಸ್ ಮೋಹನ್, ಬೆಂಗಳೂರು
ಶ್ರೀ ಎನ್ ಕೃಷ್ಣ ಪೈ, ಉಡುಪಿ

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

* ACE Designers Limited, Bangalore
* The Association of People with Disability (APD), Bangalore



## ಬೆಂಗಳೂರಿನ ಪ್ರಕರ್ಶ ಅಕಾಡೆಮಿಯಿಂದ ಸೇವಾಭಾರತಿಗೆ ಭೇಟಿ

ಪ್ರಕರ್ಶ ಅಕಾಡೆಮಿ ಸಂಸ್ಥೆಯ ಕು. ಕೀರ್ತನ ಎಸ್. ಮತ್ತು ಶ್ರೀ ಭವನ್ ವಿ. ಇವರು ಡಿಸೆಂಬರ್ 27 ರಂದು ಆರ್ಗನೈಜೇಷನ್ ಡೆವಲಪ್‌ಮೆಂಟ್ ನಿಮಿತ್ತವಾಗಿ ಸಂಸ್ಥೆಗೆ ಭೇಟಿ ನೀಡಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಬಗ್ಗೆ ವಿಮರ್ಶೆ ಮಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಹಿರಿಯ ಪ್ರಬಂಧಕರಾದ ಚರಣ್ ಕುಮಾರ್ ಎಂ. ಉಪಸ್ಥಿತರಿದ್ದರು.

*The world worries about disability more than disabled people do*

# ಸಂಪನ್ನಗೊಂಡ 29ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ









**ಶಿಶಿಲ (ಡಿ. 28 ):** ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಶ್ರೀ ದುರ್ಗಾಪರಮೇಶ್ವರಿ ಯುವಕ ಮಂಡಲ ವೈಕುಂಠಪುರ ಶಿಶಿಲ ಮತ್ತು ಗ್ರಾಮ ಪಂಚಾಯತಿ ಶಿಶಿಲ ಇವುಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಉಚಿತ 29ನೇ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಡಿಸೆಂಬರ್ 28 ರಂದು ಶ್ರೀ ದುರ್ಗಾಪರಮೇಶ್ವರಿ ಯುವಕ ಮಂಡಲ ಕಟ್ಟಡ ವೈಕುಂಠಪುರದಲ್ಲಿ ನಡೆಯಿತು.

ಕನ್ಯಾಡಿ ಶ್ರೀ ದುರ್ಗಾ ಮಾತೃ ಮಂಡಳಿ ಇದರ ಅಧ್ಯಕ್ಷರಾದ ಶ್ರೀಮತಿ ಶಾಂತ ಪಿ. ಶೆಟ್ಟಿ ಶಿಶಿಲ ಜನರಿಗೆ ಸ್ವ–ಉದ್ಯೋಗ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು ಬಹಳ ಸಂತೋಷದ ವಿಷಯ ಎಂದು ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷೆ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘ ಇದರ ಸಿಇಒ ಶ್ರೀಮತಿ ಸ್ವರ್ಣಗೌರಿ ಟೈಲರಿಂಗ್ ಕಲಿಯುವುದರಿಂದ ಬೇರೆ ಬೇರೆ ರೀತಿಯ ಸ್ವ–ಉದ್ಯೋಗದ ಅವಕಾಶವಿರುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿ ಮಹಿಳೆಯರು ಯಾರಿಗೂ ಅವಲಂಬಿತವಾಗದೆ ಸ್ವಾವಲಂಬಿ ಜೀವನವನ್ನು ನಡೆಸುವುದು ಅತ್ಯಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಶ್ರೀಮತಿ ವಿನಯ ಶೆಂಡ್ಯೆ ಎಲ್ಲರಿಗೂ ಶುಭಹಾರೈಸಿ ಸಂತಸ ವ್ಯಕ್ತಪಡಿಸಿದರು. ನಮ್ಮ ಸಂಸ್ಥೆಯ ಪರವಾಗಿ ಶ್ರೀಮತಿ ವಿನಯ ಶೆಂಡ್ಯೆಯವರನ್ನು ಸನ್ಮಾನಿಸಿ ಗೌರವಿಸಲಾಯಿತು. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಲಾಯಿತು.

ಶಿಶಿಲದ ಶ್ರೀ ಚಾಮುಂಡೇಶ್ವರಿ ದೇವಿ ದೇವಸ್ಥಾನದ ಟ್ರಸ್ಟಿ ಶ್ರೀಮತಿ ಚಂದ್ರಾವತಿ, ಶಿಶಿಲ ದುರ್ಗಾಪರಮೇಶ್ವರಿ ಯುವಕ ಮಂಡಲ ವೈಕುಂಠಪುರದ ಮಾಜಿ ಅಧ್ಯಕ್ಷರಾದ ಶ್ರೀ ಚೆನ್ನಪ್ಪ ಕೆ.ಎಂ. ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 25 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸೇವಾಭಾರತಿ ಕನ್ಯಾಡಿಯ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್. ಸ್ವಾಗತಿಸಿ, ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕೋಆರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಅಕೌಂಟೆಂಟ್ ಅಕ್ಷತಾ ಧನ್ಯವಾದವಿತ್ತರು.

## ಅದಮ್ಯಚೇತನ ಟ್ರಸ್ಟ್ ಸಹ–ಸಂಸ್ಥಾಪಕರು ಸೇವಾಧಾಮಕ್ಕೆ ಭೇಟಿ



ಬೆಂಗಳೂರಿನ ಅದಮ್ಯಚೇತನ ಟ್ರಸ್ಟ್ ಇದರ ಸಹ ಸಂಸ್ಥಾಪಕರಾಗಿರುವ ತೇಜಸ್ವಿನಿ ಅನಂತ ಕುಮಾರ್ ಡಿಸೆಂಬರ್ 7 ರಂದು ಸೇವಾಧಾಮಕ್ಕೆ ಭೇಟಿ ನೀಡಿ ಸೇವಾಭಾರತಿ ಸಂಸ್ಥೆಯು ಮಾಡುವ ಸೇವಾಕಾರ್ಯಗಳನ್ನು ಶ್ಲಾಘಿಸಿ ದಿವ್ಯಾಂಗರ ಆರೋಗ್ಯದ ಬಗ್ಗೆ ವಿಚಾರಿಸಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಸ್ಮಿತಾ ಶ್ರೀಹರ್ಷ, ಶ್ರೀಮತಿ ಮೀನಾ ಕೆ. ಶಾಸ್ತ್ರಿ, ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಮತ್ತು ಆರೈಕೆದಾರರು ಉಪಸ್ಥಿತರಿದ್ದರು.

## ಬೆಂಗಳೂರಿನ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ ಸಂಸ್ಥೆಯಿಂದ ಸೇವಾಭಾರತಿಗೆ ಭೇಟಿ




APD ಸಂಸ್ಥೆಯ ಫಿಸಿಯೋಥೆರಪಿಸ್ಟ್ ಶ್ರೀ ಹರ್ಷನ್‌ರವರು ಡಿಸೆಂಬರ್ 27 ರಂದು ಸಂಸ್ಥೆಗೆ ಭೇಟಿ ನೀಡಿ ಪ್ರೋಗ್ರಾಮ್ ಟೀಂ ಕಾರ್ಯಚಟುವಟಿಕೆಗಳ ಬಗ್ಗೆ ವಿಮರ್ಶೆ ಮಾಡಿದರು. 28 ರಂದು ದಕ್ಷಿಣಕನ್ನಡ ಜಿಲ್ಲೆಯ 3 ದಿವ್ಯಾಂಗರ ಮನೆಗೆ ಭೇಟಿನೀಡಿ ಅನೇಕ ಮಾಹಿತಿಯನ್ನು ಪಡೆದುಕೊಂಡು ಆರೋಗ್ಯದ ಬಗ್ಗೆ ಸಲಹೆಯನ್ನು ನೀಡಿದರು.

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಗಾರ



ಡಿಸೆಂಬರ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ರಾಜೇಶ್ ನಾವಡ ಜಿ. ವಿ. ಸಹಾಯಕ ಪ್ರಾಧ್ಯಾಪಕರು, ಫಿಸಿಯೋಥೆರಪಿ ಡಿಪಾರ್ಟ್‌ಮೆಂಟ್, ಮಾಹೆ ಮಣಿಪಾಲ ಇವರು ಬೆನ್ನುಹುರಿ ಅಪಘಾತ–ಕ್ಕೊಳಗಾದ ದಿವ್ಯಾಂಗರಿಗಾಗಿ ದೇಹದ ಮೇಲಿನ ಭಾಗವನ್ನು ಬಲಪಡಿಸುವ ವ್ಯಾಯಾಮಗಳ ಬಗ್ಗೆ ಮಾಹಿತಿ ಇತ್ತರು. ಕಾರ್ಯಗಾರದಲ್ಲಿ ಒಟ್ಟು 62 ಮಂದಿ ಭಾಗವಹಿಸಿದ್ದರು.

# ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಕಿಶೋರ್ ಆದ ನಾನು ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಿಂದ ಬಂದಿದ್ದೇನೆ. ನಾನು ಕೆಲಸದಿಂದ ಮನೆಗೆ ತೆರಳುವ ಸಂದರ್ಭದಲ್ಲಿ ಬೈಕ್ ಅಪಘಾತದಿಂದ ಬೆನ್ನುಹುರಿ ಅಪಘಾತವಾಗಿದೆ. T12 ಕಂಪ್ಲೀಟ್ ಇಂಜುರಿ ಆಗಿತ್ತು. ನನಗೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ. ಎ.ಜೆ. ಆಸ್ಪತ್ರೆ ಮಂಗಳೂರು ಇಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನ್ನ ಬಲಕೈಗೆ ಪೆಟ್ಟು ಬಿದ್ದಿದ್ದು ಯಾವುದೇ ಕೆಲಸ ಮಾಡಲು ಆಗುತ್ತಿರಲಿಲ್ಲ. ಸೇವಾಧಾಮದ ಪರಿಚಯದಿಂದ ನಾನು ಮೂರು ತಿಂಗಳುಗಳ ಕಾಲ ಫಿಸಿಯೋಥೆರಪಿ ಮತ್ತು ಯೋಗಜ್ಞಾನದಿಂದ ನಾನು ಪುನಶ್ಚೇತನಗೊಂಡಿದ್ದೇನೆ. ಈಗ ನಾನು ನನ್ನ ಎಲ್ಲಾ ಕೆಲಸಗಳನ್ನು ಸ್ವತಃ ನಾನೇ ಮಾಡಿಕೊಳ್ಳುತ್ತಿದ್ದೇನೆ. ವೀಲ್‌ಚೇರ್ ಮತ್ತು ಕ್ಯಾಲಿಪರ್ ಅವಶ್ಯಕತೆಗಳನ್ನು ಅರಿತಿದ್ದೇನೆ. ಗಾಯಗಳು ಮತ್ತು ಆರೋಗ್ಯದ ಏರುಪೇರುಗಳ ಬಗ್ಗೆ ಅರಿವು ಮೂಡಿಸಿದ್ದಾರೆ. ಮಾನಸಿಕವಾಗಿ ಅಸ್ವಸ್ಥವಾಗಿದ್ದ ನಾನು ಸೇವಾಧಾಮದಿಂದ ಚೇತರಿಸಿಕೊಂಡಿದ್ದೇನೆ. CIC ಮತ್ತು DS ಗಳ ಬಗ್ಗೆಯೂ ಅರಿವು ಬಂದಿದೆ. ಸೇವಾಧಾಮದ ವಸತಿಯು ತುಂಬಾ ಚೆನ್ನಾಗಿದ್ದು ಊಟ ಉಪಹಾರಗಳಲ್ಲಿ ಯಾವುದೇ ಕೊರತೆ ಇಲ್ಲ. ಇಲ್ಲಿನ ಎಲ್ಲಾ ಸೌಕರ್ಯಗಳು ನನಗೆ ತೃಪ್ತಿ ತಂದುಕೊಟ್ಟಿದೆ. ಇದಕ್ಕೆಲ್ಲಾ ಕಾರಣವಾದ ಸೇವಾಭಾರತಿ ಸಂಸ್ಥಾಪಕರಿಗೆ, ಅಧ್ಯಕ್ಷರಿಗೆ, ಕಾರ್ಯದರ್ಶಿಗಳಿಗೆ ಹಾಗೂ ಎಲ್ಲಾ ಸಿಬ್ಬಂದಿವರ್ಗದವರಿಗೆ ನನ್ನ ತುಂಬುಹೃದಯದ ಧನ್ಯವಾದಗಳು.

**ಇತಿ ನಿಮ್ಮ ವಿಶ್ವಾಸಿ**
**ಕಿಶೋರ್, ಬೆಳ್ತಂಗಡಿ**

## ಎನೇಬಲ್ ಇಂಡಿಯಾ ಸಂಸ್ಥೆಯಿಂದ ಸೇವಾಧಾಮದ ಫಲಾನುಭವಿ ನಗದು ಪುರಸ್ಕಾರಕ್ಕೆ ಆಯ್ಕೆ




ಬೆಂಗಳೂರಿನ ಎನೇಬಲ್ ಇಂಡಿಯಾ ಸಂಸ್ಥೆಯು ಆಯೋಜಿಸಿದಂತಹ ಪ್ರಾಜೆಕ್ಟ್ ಡಿಸ್ಕವರಿ 5.0 ಸ್ಪರ್ಧೆಯ ಜೀವನೋಪಾಯದ ವಿಭಾಗದಲ್ಲಿ ಭಾಗವಹಿಸಿದ ಸೇವಾಧಾಮದ ಫಲಾನುಭವಿ ಶ್ರೀ ಜಗದೀಶ್ ಕನ್ಯಾಡಿಗೆ ಪ್ರಥಮ ಸ್ಥಾನ. ಇವರು ಕಳೆದ ಒಂದು ವರ್ಷದಿಂದ ತನ್ನ ಜೀವನವನ್ನು ಸಾಗಿಸಲು ಎಳನೀರು ವ್ಯಾಪಾರ ಮಾಡುತ್ತಿದ್ದು ಗಾಲಿಕುರ್ಚಿಯಲ್ಲಿ ಕುಳಿತು ಅಂಗಡಿ ನಿರ್ವಹಣೆ ಮಾಡಲು ಮಾರ್ಪಾಡು ಮಾಡಿಕೊಂಡಿರುತ್ತಾರೆ. ಇವರ ಈ ವ್ಯವಸ್ಥೆಯು ಇತರ ವಿಕಲಚೇತನರಿಗೂ ಮಾದರಿಯಾಗಲಿದೆ ಮತ್ತು ಜೀವನೋಪಾಯ ಕ್ಷೇತ್ರದಲ್ಲಿ ಒಳ್ಳೆಯ ಪರಿಹಾರ ಎಂದು ಎನೇಬಲ್ ಇಂಡಿಯಾದವರು ಪ್ರಥಮ ನಗದು ಬಹುಮಾನಕ್ಕೆ ಆಯ್ಕೆ ಮಾಡಿರುತ್ತಾರೆ.

## ಬೆಂಗಳೂರಿನಿಂದ ಸೌತಡ್ಕದ ಪುನಶ್ಚೇತನ ಕೇಂದ್ರಕ್ಕೆ ದೇಣಿಗೆ ಸಹಾಯ




ಬೆಂಗಳೂರಿನ ಬಿ.ಎಸ್ ಮೋಹನ್ ಹಾಗೂ ಕುಟುಂಬಸ್ಥರು ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಡಿಸೆಂಬರ್ 31 ರಂದು ಭೇಟಿ ನೀಡಿ ಸನಿವಾಸಿಗಳ ಆರೋಗ್ಯ ವಿಚಾರಿಸಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ಶುಭಹಾರೈಸಿ ದೇಣಿಗೆ ನೀಡಿ ಸಹಕರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಅಕೌಂಟೆಂಟ್ ಕು. ಅಕ್ಷತಾ, ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಮತ್ತು ಆರೈಕೆದಾರರು ಉಪಸ್ಥಿತರಿದ್ದರು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಪ್ರತಾಪ್ ಸಿಂಹ ನಾಯಕ್
ಉಜಿರೆ




ಕು। ರೇಖಾ ಉದಯಶಂಕರ್
ಕೊಪ್ಪ



ಡಾ॥ ದಯಾಕರ್ ಎಂ.ಎಂ.,
ಉಜಿರೆ



ಕು। ಚೈತ್ರ ಜಿ.ಕೆ
ಸಂಪಾಜೆ



ಕು। ಭವ್ಯ ರೈ
ಪುತ್ತೂರು



ಶ್ರೀಮತಿ ನೀಲಂಗುಪ್ತಾ
ರಾಜಸ್ಥಾನ್



ಶ್ರೀ ಸಮರ್ಥ್ ವಿ. ರಾವ್
ಬೆಂಗಳೂರು



ಕೆ. ಪುರಂದರ ರಾವ್
ಸೃಷ್ಟಿ, ನಾರ್ಯ

# APD ಯ ಸಹಕಾರದೊಂದಿಗೆ ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ



ಶ್ರೀ ನಾಗೇಶ್ ಕುಂದ್ರು
ಚಿಕ್ಕಮಗಳೂರು



ಶ್ರೀ ಪೂರ್ಣೇಶ್,
ಶೃಂಗೇರಿ



ಶ್ರೀ ಸಂಕೇತ್,
ಮೂಡಿಗೆರೆ



ಶ್ರೀ ಸುಧೀರ್ ಕಿಗ್ಗ,
ಶೃಂಗೇರಿ



ಶ್ರೀ ವರುಣ್ ದುಡ್ಡ
ಹಾಸನ



ಶ್ರೀ ಅನಿಲ್ ಹೆಗ್ಡೆ,
ಎರ್ಲಂಪಾಡಿ, ಕಾರ್ಕಳ

# APD ಯ ಸಹಕಾರದೊಂದಿಗೆ ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ


ಶ್ರೀ ಬಾಬಣ್ಣ
ಮಂದಾರ್ತಿ, ಕುಂದಾಪುರ


ಶ್ರೀ ಭಾಸ್ಕರ ಪೂಜಾರಿ
ಮರ್ಕಂಜ, ಉಡುಪಿ


ಶ್ರೀ ಚಂದ್ರಶೇಖರ್
ಮದುಕೋಲ, ಕುಂದಾಪುರ


ಶ್ರೀ ದಿನೇಶ್ ಸೆರೆಜರ,
ಕುಂದಾಪುರ


ಶ್ರೀ ಜಿ. ರಮೇಶ್
ಮಯ್ಯ, ಕುಂದಾಪುರ


ಶ್ರೀ ರಾಧಾಕೃಷ್ಣ
ನಾಯಕ್, ಕುಂದಾಪುರ


ಶ್ರೀ ಬೆಸಿಲ್ ಪಿಂಟೋ,
ಮಂಗಳೂರು


ಶ್ರೀ ಇಬ್ರಾಹಿಂ
ಪರ್ಪಳ, ಪುತ್ತೂರು


ಶ್ರೀ ರಿತಿಕ್ ದೇವಾಡಿಗ,
ಮಂಗಳೂರು


ಶ್ರೀ ರೋಶನ್ ಡಿಸೋಜಾ,
ಪರ್ಪಿಕಲ್ಲು, ಬೆಳ್ತಂಗಡಿ


ಶ್ರೀ ಶೈನಿತ್,
ಕೊಯ್ಯೂರು, ಬೆಳ್ತಂಗಡಿ


ಶ್ರೀ ರಘು ಸಿ.ಎಚ್.
ಸಕಲೇಶಪುರ


ಶ್ರೀ ಪ್ರಶಾಂತ್ ಶೆಟ್ಟಿ,
ನೆಲ್ಲಿಕಾರು, ಕಾರ್ಕಳ


ಶ್ರೀ ಸಾಧಿಕ್
ಮಲ್ಪೆ, ಉಡುಪಿ

## ದಿವ್ಯಾಂಗರಿಗೆ ಸಹಾಯಧನ ವಿತರಣೆ




ಅಕಾಡೆಮಿ ಆಫ್ ಲಿಬರಲ್ ಎಜುಕೇಶನ್ ಸ್ಥಾಪಕ ಅಧ್ಯಕ್ಷರಾಗಿದ್ದ ದಿ| ಡಾ. ಕುರುಂಜಿ ವೆಂಕಟ್ರಮಣ ಗೌಡರ 96 ನೇ ಜನ್ಮದಿನದ ಅಂಗವಾಗಿ ದಿಸೆಂಬರ್ 26 ರಂದು ಕೆ.ವಿ.ಜಿ ಸುಳ್ಯ ಹಬ್ಬ ಸಮಾಜ ಸೇವಾ ಸಂಘದ ಕಚೇರಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ತಲಾ ರೂ. 25,000/– ಸಹಾಯಧನವನ್ನು ನೀಡಿ ಸಹಕರಿಸಿದ್ದಾರೆ.

# ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ 3 ತಿಂಗಳ ಪುನಶ್ಚೇತನವನ್ನು ಪಡೆದುಕೊಂಡು ಡಿಸೆಂಬರ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



ಕು। ವೇದಾವತಿ, ಕನ್ಯಾಡಿ



ಶ್ರೀಮತಿ ಭಾರತಿ ಸುಳ್ಯ



ಶ್ರೀ ರಾಜೀವ್, ಸಿದ್ದಾಪುರ



ಶ್ರೀ ಪವನ್ ಚಿಕ್ಕಮಗಳೂರು



ಶ್ರೀ ಸುಧೀರ್, ಕಿಗ್ಗ

## ಡಿಸೆಂಬರ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ | – 20 |
| 2. | ವಾಕರ್ | – 1 |
| 3. | ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ | – 38 |

# ಸ್ಪಂದನ ವಾಹಿನಿಯ ಸೆಬಾಸ್ಟಿಯನ್‌ರವರು ಕುಟುಂಬಸ್ಥರೊಂದಿಗೆ ಸೇವಾಧಾಮಕ್ಕೆ ಭೇಟಿ



ಸ್ಪಂದನ ವಾಹಿನಿಯ ಶ್ರೀ ಸೆಬಾಸ್ಟಿಯನ್ ಮತ್ತು ಅವರ ಕುಟುಂಬವು ಕ್ರಿಸ್ಮಸ್ ಪ್ರಯುಕ್ತ ಸೌತಡ್ಕದ ಸೇವಾಧಾಮ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಡಿಸೆಂಬರ್ 27 ರಂದು ಭೇಟಿ ನೀಡಿ ಸನಿವಾಸಿಗಳ ಆರೋಗ್ಯ ವಿಚಾರಿಸಿ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ದಕ್ಷಿಣಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ, ಅಕೌಂಟೆಂಟ್ ಕು। ಅಕ್ಷತಾ, ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಮತ್ತು ಆರೈಕೆದಾರರು ಉಪಸ್ಥಿತರಿದ್ದರು.

## ನಿಮಗಿದು ತಿಳಿದಿರಲಿ

### ಇಂದ್ರಿಯಗಳು ಮತ್ತು ಗ್ರಹಿಕೆ

1. **100 ಬಿಲಿಯನ್ ನ್ಯೂರಾನ್‌ಗಳು:** ಮಾನವನ ಮೆದುಳು ಸರಿಸುಮಾರು 100 ಬಿಲಿಯನ್ ನ್ಯೂರಾನ್‌ಗಳನ್ನು ಹೊಂದಿರುತ್ತದೆ.
2. **ಸಿನಾಪ್ಸಸ್:** ಪ್ರತಿ ನರಕೋಶವು ಸಾವಿರಾರು ಸಿನಾಪ್ಸ್‌ಗಳನ್ನು ರಚಿಸಬಹುದು, ಇದು ಸಂಕೀರ್ಣ ಸಂವಹನಕ್ಕೆ ಅನುವು ಮಾಡಿಕೊಡುತ್ತದೆ.
3. **ಮೆದುಳಿನ ಅಲೆಗಳು:** ಮಾನವನ ಮೆದುಳು ಸಣ್ಣ ಬಲ್ಬ್ ಶಕ್ತಿ ತುಂಬಲು ಸಾಕಷ್ಟು ವಿದ್ಯುತ್ ಉತ್ಪಾದಿಸುತ್ತದೆ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### DONATE & JOIN US IN OUR MISSION


A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank,
Kokkada Branch

### Support us for constructions of Rehabilitation Centre

A/c Name : Sevabharathi
A/c No : 139322010000383
IFSC : UBIN0913936
Account Type : Savings Account
Union Bank of India, UJIRE Branch

*We are put in situations to build our character... not destroy us*

# ಬೆನ್ನುಹುರಿ ಅಪಘಾತಕ್ಕೊಳಗಾದರೂ ತನ್ನ ಜೀವನವನ್ನು ವೈಯರಿಂಗ್ ಕೆಲಸದಲ್ಲಿ ರೂಪಿಸಿಕೊಂಡ ರವೀಂದ್ರ ಶಂಕರನಾರಾಯಣರವರ ಯಶೋಗಾಥೆ





ರವೀಂದ್ರ ಶಂಕರನಾರಾಯಣ ಇವರು ಮೂಲತಃ ಕುಂದಾಪುರ ತಾಲೂಕಿನ ಶಂಕರನಾರಾಯಣ ಗ್ರಾಮದ ಕೌಲಾಳಿ ನಿವಾಸಿ. ಜೂನ್ 1, 1981 ರಲ್ಲಿ ಪ್ರಥಮ ಪುತ್ರನಾಗಿ ಶ್ರೀ ಗೋಪಾಲ ಮತ್ತು ಶ್ರೀಮತಿ ಮುತ್ತು ದಂಪತಿಯ ಪುತ್ರರಾಗಿ ಜನಿಸಿದರು. ಕಳೆಂಜೆಡ್ಡ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ತದನಂತರ ಪ್ರೌಢಶಿಕ್ಷಣವನ್ನು ಶಂಕರನಾರಾಯಣದಲ್ಲಿ ಪೂರ್ಣಗೊಳಿಸಿದರು. ಡಿಪ್ಲೋಮಾ ಓದಲು ಆಸೆ ಇದ್ದ ರವೀಂದ್ರರವರ ಮನೆಯಲ್ಲಿ ಬಡತನವಿದ್ದ ಕಾರಣ ಮುಂದಿನ ಶಿಕ್ಷಣದ ಆಸೆಯನ್ನು ಕೈಬಿಟ್ಟರು. ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗದೆ ಮನೆಗಾಗಿ ಮೋಟರ್ ವೈಂಡಿಂಗ್ ಕೆಲಸವನ್ನು ಪ್ರಾರಂಭಿಸಿದರು. ಕಾಲಘಟ್ಟ ಕಳೆಯುತ್ತಿದ್ದಂತೆ ದುಡಿಮೆ ಸಾಲದೆ ವೈಯರಿಂಗ್ ಕೆಲಸವನ್ನು ಮಾಡಲು ಪ್ರಾರಂಭಿಸಿದರು. ಸುಮಾರು 10 ವರ್ಷಗಳ ಕಾಲ ಇದರಲ್ಲೇ ಕೆಲಸವನ್ನು ಮಾಡುತ್ತಾ ಕಷ್ಟಸುಖಗಳನ್ನು ಸಂಭಾಳಿಸಿಕೊಂಡು ಹೋಗುತ್ತಿದ್ದ ದಿನಗಳಲ್ಲಿ ಡಿಸೆಂಬರ್ 1 2011ರ ಬೆಳಗಿನ ಜಾವದ ಸಮಯದಲ್ಲಿ ವಿದ್ಯುತ್ ಕಂಬದಿಂದ ಬಿದ್ದು ಪ್ರಾಥಮಿಕ ಚಿಕಿತ್ಸೆಯನ್ನು ಕುಂದಾಪುರದ ಚಿನ್ಮಯ್ ಆಸ್ಪತ್ರೆಯಲ್ಲಿ ಪಡೆದರು. ಮುಂದಿನ ಹೆಚ್ಚಿನ ಚಿಕಿತ್ಸೆ ಮುಂದುವರಿಸಲು ಸಾಧ್ಯವಾಗದ ಕಾರಣ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಅವರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ವಿಷಯ ತಿಳಿಸಿದರು. ಇನ್ನು ಮುಂದೆ ನಡೆದಾಡಲು ಸಾಧ್ಯವಿಲ್ಲ ಹಾಗೂ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ಮನವರಿಕೆ ಮಾಡಿದರು. ಈ ವಯಸ್ಸಿನಲ್ಲಿ ನನ್ನ ತಾಯಿಗೆ ನಾನು ಬೆನ್ನೆಲುಬಾಗಿ ನಿಲ್ಲಬೇಕಾದ ಸಂದರ್ಭದಲ್ಲಿ ನನ್ನ ತಾಯಿ ನನಗೆ ಬೆನ್ನೆಲುಬಾಗಿ ನಿಂತು ಧೈರ್ಯ ತುಂಬಿದ್ದಾರೆ ಎಂದು ವ್ಯಕ್ತಪಡಿಸಿದ್ದಾರೆ.

ಕೊಪ್ಪಳದ ಸಾಮರ್ಥ್ಯ ಫಿಸಿಯೋಥೆರಪಿಯಲ್ಲಿ 1 ತಿಂಗಳ ಪುನಶ್ಚೇತನವನ್ನು ಪಡೆದುಕೊಂಡರು. 2020 ರಲ್ಲಿ ಕುಂದಾಪುರದ ಆದರ್ಶ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್‌ರವರ ಪರಿಚಯ ಮಾಡಿಕೊಂಡರು. ನಂತರ 2021 ರಲ್ಲಿ ಟಿಎಂಎ ಪೈ ಆಸ್ಪತ್ರೆಯಲ್ಲಿ ನಡೆದ ಉಚಿತ ವೈದ್ಯಕೀಯ ತಪಾಸಣಾ ಶಿಬಿರದಲ್ಲಿಯೂ ಸಹ ಭಾಗವಹಿಸಿದ್ದರು ನಂತರ ಸೌತಡ್ಕದ ಬೆನ್ನುಹುರಿ ಅಪಘಾತಕ್ಕೊಳಗಾದ ಪುನಶ್ಚೇತನ ಕೇಂದ್ರದ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡು ಸೇವಾಧಾಮಕ್ಕೆ ಭೇಟಿಯನ್ನು ಮಾಡಿದರು. ಬೆನ್ನುಹುರಿ ಅಪಘಾತಕ್ಕೆ ಒಳಗಾಗಿದ್ದರು ಸಹ ಇನ್ನೊಬ್ಬರ ನೋವಿಗೆ ಸ್ಪಂದಿಸಿ ತನ್ನಿಂದ ಏನಾದರೂ ಸಹಾಯವನ್ನು ಮಾಡಬೇಕು ಎಂಬ ನಿಟ್ಟಿನಲ್ಲಿ ಸಂಸ್ಥೆಗೆ 2000 ದೇಣಿಗೆಯನ್ನು ನೀಡಿ ಮಾನವೀಯತೆಯನ್ನು ಮೆರೆದಿದ್ದಾರೆ. ಸೇವಾಭಾರತಿ ವತಿಯಿಂದ ಗಾಲಿಕುರ್ಚಿಯನ್ನು ಪಡೆದು ಸಣ್ಣಪುಟ್ಟ ಕೆಲಸವನ್ನು ಮಾಡುತ್ತಾ ತನ್ನ ಜೀವನವನ್ನು ಸಾಗಿಸುತ್ತಿದ್ದಾರೆ.

ಬೆನ್ನುಹುರಿ ಅಪಘಾತಕ್ಕೆ ಒಳಗಾಗಿದ್ದರೂ ಸಹ ಇನ್ನೊಬ್ಬರಿಗೆ ನಾನು ಭಾರವಾಗದೆ ಕೆಲಸವನ್ನು ಮಾಡುತ್ತ ನನ್ನ ಕಾಲಮೇಲೆ ನಾನೇ ನಿಂತುಕೊಳ್ಳಬಲ್ಲೆ ಎಂಬ ಧೈರ್ಯವನ್ನು ಮಾಡಿ ವಿದ್ಯುತ್ ದೀಪ ಅಲಂಕಾರವನ್ನು ಮಾಡುವುದು, ಹೊಸದಾಗಿ ವಿದ್ಯುತ್ ದೀಪವನ್ನು ತಯಾರಿಸುವ ಕೆಲಸವನ್ನು ಪ್ರಾರಂಭಿಸಿದರು. ಇದೀಗ ಎಲ್ಲರಿಗೂ ಮಾದರಿಯಾಗುವಂತೆ ಕೆಲಸವನ್ನು ಮಾಡುತ್ತ ತನ್ನ ಜೀವನವನ್ನು ಸಾಗಿಸುತ್ತಿದ್ದಾರೆ.